<u>ಆರನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳು, ಬೆಂಗಳೂರು ನಗರ</u>

| | |
|---|---|
| ಕ್ರಿ.ಮಿ. ಸಂಖ್ಯೆ | ಃ 439/2021 |
| ಪಿ.ಡಬ್ಲ್ಯೂ | ಃ 01 |
| ಸಾಕ್ಷಿಯ ಹೆಸರು | ಃ ಶ್ರೀಮತಿ ರಶೀದಾ ಅನ್ವರ್ |
| ಗಂಡನ ಹೆಸರು | ಃ ಶ್ರೀ ಅನ್ವರ್ ಜಾನ್ ಎಂ. |
| ವಯಸ್ಸು | ಃ 57 ವರ್ಷ |
| ವಾಸಸ್ಥಳ | ಃ ಲಕ್ಕಸಂದ್ರ, ಬೆಂಗಳೂರು. |

<u>ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 08.02.2021.</u>

<u>ಮುಖ್ಯ ವಿಚಾರಣೆ ಃ ಶ್ರೀಮತಿ ಸರಸ್ವತಿ ವಕೀಲರಿಂದಃ-</u>

ನಾನು ದಿನಾಂಕ 14-12-1964 ರಂದು, ನಂ.15, 6 ನೇ ಮೈನ್, 15 ನೇ ಕ್ರಾಸ್, ಸುಬ್ಬರಾಜು ಲೇಔಟ್, ಲಕ್ಕಸಂದ್ರ, ಆಡುಗೋಡಿ, ಬೆಂಗಳೂರಿನಲ್ಲಿ ಜನಿಸಿರುತ್ತೇನೆ. ನನ್ನ ಜನನದ ಸಂಗತಿಯನ್ನು ನನ್ನ ತಂದೆ ತಾಯಿಯವರು ಅವರ ಕಾನೂನಿನ ತಿಳುವಳಿಕೆಯ ಕೊರತೆಯಿಂದ ಎದುರುದಾರರಿಗೆ ತಿಳಿಸಿರುವುದಿಲ್ಲ.

ನನ್ನ ಜನನದ ಪ್ರಮಾಣ ಪತ್ರವನ್ನು ನೀಡಲು ಎದುರುದಾರರ ಕಛೇರಿಯಲ್ಲಿ ಅರ್ಜಿಯನ್ನು ಸಲ್ಲಿಸಿದಾಗ, ನನ್ನ ಜನನದ ದಿನಾಂಕ, ತಿಂಗಳು ಮತ್ತು ವರ್ಷವನ್ನು ಅವರ ಕಛೇರಿಯ ಸಂಬಂಧಪಟ್ಟ ಕಡತದಲ್ಲಿ ನಮೂದು ಮಾಡಿರದಿದ್ದಕ್ಕಾಗಿ ಎದುರುದಾರರು ದಿನಾಂಕ 18-01-2021 ರಂದು ಅಲಭ್ಯ ಪ್ರಮಾಣ ಪತ್ರವನ್ನು ನೀಡಿರುತ್ತಾರೆ ಈಗ ನನಗೆ ನನ್ನ ಜನನ ಪ್ರಮಾಣ ಪತ್ರದ ಅಗತ್ಯತೆ ಇರುತ್ತದೆ

ದಿನಾಂಕ 18-01-2021 ರ ಅಲಭ್ಯ ಪ್ರಮಾಣ ಪತ್ರವನ್ನು ನೋಡುತ್ತಿದ್ದು ಅದು ನಿ..ಪಿ.1 ರಂತೆ, ನನ್ನ ಮೂಲ ಆಧಾರ್ ಕಾರ್ಡನ್ನು ನೋಡುತ್ತಿದ್ದು ಅದು ನಿ.ಪಿ2 ರಂತೆ ಇರುತ್ತದೆ, ನನ್ನ ಮೂಲ ಚುನಾವಣಾ ಆಯೋಗದ ಗುರುತಿನ ಚೀಟಿಯನ್ನು ನೋಡುತ್ತಿದ್ದು ಅದು ನಿ.ಪಿ.3 ರಂತೆ ಮತ್ತು ನನ್ನ ಮೂಲ ಪಾಸ್ ಪೋರ್ಟ್ ಕಾರ್ಡನ್ನು ನೋಡುತ್ತಿದ್ದು ಅದು ನಿ.ಪಿ.4 ರಂತೆ ಇರುತ್ತದೆ.

ಆದ್ದರಿಂದ ನಾನು ನನ್ನ ಅರ್ಜಿಯಲ್ಲಿ ಕೇಳಿದ ಹಾಗೆ ನನ್ನ ಅರ್ಜಿಯನ್ನು ಪುರಸ್ಕರಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ಪಾಟೀ ಸವಾಲುಃ ಶ್ರೀಮತಿ ಜಿ.ಬಿ. ವಕೀಲರು ಎದುರುದಾರರಿಂದಃ

ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲಾತಿಗಳು ನೈಜವಾಗಿರದೆ ಅವುಗಳನ್ನು ಈ ಅರ್ಜಿಗೋಸ್ಕರ ನಾನೇ ಸೃಷ್ಟಿಸಿಕೊಂಡು ಸಲ್ಲಿಸಿರುವ ಸುಳ್ಳು ದಾಖಲಾತಿಗಳು ಆಗಿರುತ್ತವೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

ಓ.ಹೇ.ಕೇ. ಸರಿ ಇದೆ.

6 ನೇ ಎಸಿಎಂಎಂ., ಬೆಂಗಳೂರು.